ದಿನಾಂಕಃ 22.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೊಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ  ವಾದಿಯ ಪರ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಹಾಜರು ಪಡಿಸಿರುತ್ತೇನೆ. ಅದರಲ್ಲಿರುವ ಅಂಶಗಳೆಲ್ಲಾ ಸತ್ಯವಾಗಿರುತ್ತವೆ. ಅದಕ್ಕೆ ನಾನು ಸಹಿ ಮಾಡಿದ್ದೇನೆ. ಹಲವು ದಾಖಲೆಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಖರೀದಿ ಕರಾರುಪತ್ರವನ್ನು ನಿಪಿ1 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ1 ಕ್ಕೆ ತಾನು, ಸಾಕ್ಷಿದಾರರು ಹಾಗೂ ಪತ್ರಬರಹಗಾರ ಸಹಿ ಮಾಡಿದ್ದಾರೆಂದು, ನಿಂಗಪ್ಪ ಹೆಬ್ಬೆಟ್ಟಿನ ಗುರುತು ಹಾಕಿದ್ದಾರೆಂದು ಸಹಿಗಳನ್ನು ನೋಡಿ ಗುರುತಿಸಿದ್ದಾರೆ. ಸದರಿ ಸಹಿಗಳನ್ನು ನಿಪಿ1(ಎ) ಯಿಂದ (ಡಿ) ಎಂದು ಗುರುತಿಸಲಾಯಿತು. ಆರ್ ಟಿ ಸಿ ಯನ್ನು ನಿಪಿ2 ಎಂದು, ವಕೀಲರ ನೋಟಿಸ್ ಪ್ರತಿಯನ್ನು ನಿಪಿ3 ಎಂದು, ಅಂಚೆ ರಸೀದಿಯನ್ನು ನಿಪಿ4 ಎಂದು, ಅಂಚೆ ಸ್ವೀಕೃತಿಯನ್ನು ನಿಪಿ5 ಎಂದು, ಪ್ರತ್ಯುತ್ತರ ನೋಟಿಸ್ ಪ್ರತಿಯನ್ನು ನಿಪಿ6 ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಪ್ರತಿವಾದಿಯ ಪರ ವಕೀಲರು ಮುಂದಿನ ಸುನಾವನಾ ದಿನಾಂಕದಂದು ಲಿಖಿತ ಹೇಳಿಕೆಯನ್ನು ಸಲ್ಲಿಸಿ ಪಾಟೀಸವಾಲು ಮಾಡುತ್ತೇನೆಂದು ಸಮಯ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ.ಸರಿ ಅದೆ.

(ಕೆ ಎಮ್ ಶಂಕರ್)
1 ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ